# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 8 (101) |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2021 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ವಿಭಾಗದಲ್ಲಿ ಲೆಕ್ಕ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡುವಾಗ ವೇತನ ಶ್ರೇಣಿಯಲ್ಲಿ ತಾರತಮ್ಯ ಮಾಡಿರುವುದು ನಿಜವೇ; | ಕಲಬುರಗಿ ಆಯುಕ್ತಾಲಯದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ ಡಿ 30 ಎಸ್ ಆರ್ ಪಿ 2013, ದಿನಾಂಕ:24.03.2017ರಲ್ಲಿನ ಕ್ರಮ ಸಂಖ್ಯೆ:63ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕ ಅಧೀಕ್ಷಕರ ಹುದ್ದೆಗೆ ನಿಗಧಿಪಡಿಸಿದ ವೇತನ ಶ್ರೇಣಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 06 ಎಸ್‌ಆರ್ ಪಿ 2018, ದಿನಾಂಕ:19.04.2018ರ ಪರಿಷ್ಕೃತ ವೇತ ಶ್ರೇಣಿ ರೂ.37900-70850 ರಡಿಯಲ್ಲಿ ಲೆಕ್ಕ ಅಧೀಕ್ಷಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ. |
| (ಆ) | ಬೇರೆ ವಿಭಾಗದಲ್ಲಿ ಲೆಕ್ಕ ಅಧೀಕ್ಷಕರ ಹುದ್ದೆಗೆ ಅನುಗುಣವಾಗಿ ವೇತನ ಶ್ರೇಣಿಯನ್ನು ನೀಡುತ್ತಿರುವಂತೆ ಕಲಬುರಗಿ ವಿಭಾಗದಲ್ಲಿ ನೀಡದಿರಲು ಕಾರಣವೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್.ಡಿ 30 ಎಸ್.ಆರ್.ಪಿ 2013, ದಿ:24.03.2017ರನ್ವಯ ರಾಜ್ಯದ ಎಲ್ಲಾ ಇಲಾಖೆಗಳಲ್ಲಿನ ಹುದ್ದೆಗಳ ವೇತನ ಶ್ರೇಣಿಯನ್ನು ಜಾರಿಗೊಳಿಸಿದ್ದು, ಸದರಿ ಅಧಿಸೂಚನೆಯಲ್ಲಿ ರಾಜ್ಯ ಲೆಕ್ಕ ಪತ್ರ ಇಲಾಖೆಗಳಲ್ಲಿನ ಲೆಕ್ಕ ಅಧೀಕ್ಷಕರ ಹುದ್ದೆಯ ವೇತನ ಶ್ರೇಣಿಯನ್ನು 21600-40050 ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕ ಅಧೀಕ್ಷಕರ ಹುದ್ದೆಯ ವೇತನ ಶ್ರೇಣಿಯನ್ನು 20000-36300 ನಿಗಧಿಪಡಿಸಿ ಆದೇಶಿಸಲಾಗಿದೆ. ಆದರೆ, ಆಯುಕ್ತರು, ಸಾ.ಶಿ.ಇ., ಬೆಂಗಳೂರು ಮತ್ತು ಅಪರ ಆಯುಕ್ತರು, ಸಾ.ಶಿ.ಇ, ಧಾರವಾಡ ಇವರು ಲೆಕ್ಕಾಧೀಕ್ಷಕರ ಹುದ್ದೆಗೆ ವೇತನ ಶ್ರೇಣಿ ರೂ.21600-40050ರಡಿಯಲ್ಲಿ ಪರಿಗಣಿಸಿ ಮುಂಬಡ್ತಿ ನೀಡಿರುತ್ತಾರೆ.<br><br>ಈ ಬಗ್ಗೆ ಆಂತರಿಕ ಆರ್ಥಿಕ ಸಲಹೆಗಾರರ ಅಭಿಪ್ರಾಯ ಕೋರಲಾಗಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಯು ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನಾ ಇಲಾಖೆಯ ನಿಯೋಜನೆ ಹುದ್ದೆಗಳಾಗಿದ್ದು, ಸದರಿ ಹುದ್ದೆಯ ವೇತನ ಶ್ರೇಣಿಯು 21600-40050 ಗಳಾಗಿದ್ದು, ರಾಜ್ಯ ಲೆಕ್ಕಪತ್ರ ಇಲಾಖೆಯ ಪ್ರಥಮ ದರ್ಜೆ ಸಹಾಯಕರು ಎಸ್.ಎ.ಎಸ್ ಪರೀಕ್ಷೆ ತೇರ್ಗಡೆ ಹಾಗೂ ಇಲಾಖೆಯು ನಿಗಧಿಪಡಿಸಿರುವ ತರಬೇತಿಗಳನ್ನು ಪೂರ್ಣಗೊಳಿಸಿದ ಸೂಕ್ತ ಅಭ್ಯರ್ಥಿಗಳಿಗೆ ಪದೋನ್ನತಿ ಮೂಲಕ ಲೆಕ್ಕಾಧೀಕ್ಷಕರ ಹುದ್ದೆಗೆ ನಿಯೋಜಿಸಲಾಗುವುದು. ಸರ್ಕಾರದ ಇಲಾಖೆಗಳಲ್ಲಿನ ಲೆಕ್ಕಪತ್ರ ಮತ್ತು ಆಂತರಿಕ ಲೆಕ್ಕಪರಿಶೋಧನೆಗಾಗಿ ಲೆಕ್ಕಪತ್ರ ಇಲಾಖೆಯ ಹುದ್ದೆಗಳನ್ನು ಇಲಾಖೆಯ ಅಗತ್ಯಕ್ಕೆ ತಕ್ಕಂತೆ ಸೃಜಿಸಿ ನಿಯೋಜನೆ ಮೇರೆಗೆ ಭರ್ತಿ ಮಾಡಲಾಗುತ್ತದೆ. ಸದರಿ ಕ್ರಮದ ಉದ್ದೇಶವು ಆಯಾ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನು ಲೆಕ್ಕಪತ್ರ / ಲೆಕ್ಕತಪಾಸಣೆಗೆ ನಿಯೋಜಿಸಿದಲ್ಲಿ ಪಾರದರ್ಶಕತೆ ಮತ್ತು ಸಮರ್ಪಕ ಕರ್ತವ್ಯ ನಿರೀಕ್ಷಿಸಲು ಸಾಧ್ಯವಿಲ್ಲ ಆದಕಾರಣ ಸದರಿ ಕಾರ್ಯಕ್ಕೆ ಇಲಾಖೆಯ ಹೊರಗಿನಿಂದ ಅಂದರೆ ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಗಳು ಎಸ್.ಎ. ಎಸ್ ಪರೀಕ್ಷೆಯನ್ನು ತೇರ್ಗಡೆಹೊಂದಿ ಲೆಕ್ಕಾಧೀಕ್ಷಕರ ಹುದ್ದೆಗೆ ಭರ್ತಿಯನ್ನು ಪಡೆಯುತ್ತಿರುತ್ತಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ |

| | | |
|---|---|---|
| | | ಲೆಕ್ಕಾಧೀಕ್ಷಕರ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಯ ಕಾರ್ಯವ್ಯಾಪ್ತಿ ವಿಭಿನ್ನವಾಗಿದ್ದು, ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕಾಧೀಕ್ಷಕರು ರಾಜ್ಯಾದ್ಯಂತ ಎಲ್ಲಾ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ಕಾಲಕಾಲಕ್ಕೆ ಇಲಾಖೆಯು ನಿಗಧಿಪಡಿಸಿದ್ದ ತರಬೇತಿ ಮತ್ತು ವಿವಿಧ ಸಂಸ್ಥೆಗಳಲ್ಲಿ ಕರ್ತವ್ಯನಿರ್ವಹಿಸಲಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರು ಅದೇ ಇಲಾಖೆಯಲ್ಲಿ ಮಾತ್ರ ಕರ್ತವ್ಯನಿರ್ವಹಿಸಲಿದ್ದು, ಇವರ ಕಾರ್ಯವ್ಯಾಪ್ತಿಯು ಕೇವಲ ಶಿಕ್ಷಣ ಇಲಾಖೆಗೆ ಮಾತ್ರ ಸೀಮಿತಗೊಂಡಿರುತ್ತದೆ. ಆದ್ದರಿಂದ ಆರ್ಥಿಕ ಇಲಾಖೆಯ ಆದೇಶದನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರಿಗೆ ನಿಗಧಿಪಡಿಸಿರುವ ವೇತನ ಶ್ರೇಣಿ 20000-36300 ಸಮಂಜಸವಾಗಿರುತ್ತದೆ. ಅದರಂತೆ ಸದರಿ ವೇತನ ಶ್ರೇಣಿಗೆ 2018ರ ಪರಿಷ್ಕೃತ ವೇತನ ಶ್ರೇಣಿ 37900- 70850ರಲ್ಲಿ ವೇತನವನ್ನು ನಿಗಧಿಗೊಳಿಸುವುದು ಸೂಕ್ತ" ಎಂದು ಅಭಿಪ್ರಾಯಿಸಿರುತ್ತದೆ.<br><br>ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ಇಪಿ 19 ಎಸ್‌ಟಿಬಿ 2020, ದಿನಾಂಕ:04.03.2021 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಬೆಂಗಳೂರು ಹಾಗೂ ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ಇವರಿಗೆ ಕ್ರಮವಹಿಸಲು ತಿಳಿಸಲಾಗಿರುತ್ತದೆ. |
| (ಇ) | ಈ ವಿಳಂಬಕ್ಕೆ ಕಾರಣಗಳೇನು: ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೇಲಿನ ಉತ್ತರದಂತೆ ಅನ್ವಯಿಸುವುದಿಲ್ಲ |
| (ಈ) | ಯಾವ ಯಾವ ಅಧಿಕಾರಿಗಳು / ಸಿಬ್ಬಂದಿಯವರು ವಿಳಂಬ ಮಾಡಿರುತ್ತಾರೆ; ವಿಳಂಬ ಮಾಡುತ್ತಿರುವವರ ಮೇಲೆ ಸೂಕ್ತ ಶಿಸ್ತುಕ್ರಮ ಜರುಗಿಸಲಾಗಿದೆಯೇ? (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ |
| (ಉ) | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಬೆಂಗಳೂರು ಇವರ ಆದೇಶ ಪತ್ರ ಸಂಖ್ಯೆ:ಇಡಿ 19 ಎಸ್ ಟಿ ಬಿ 2020, ದಿನಾಂಕ:04.03.2021ರ ಆದೇಶದನ್ವಯ ಲೆಕ್ಕ ಅಧೀಕ್ಷಕರ ವೇತನ ಶ್ರೇಣಿ 37900-70850ರಲ್ಲಿ ವೇತನ ನಿಗಧಿಗೊಳಿಸುವುದು ಸೂಕ್ತವಾಗಿರುತ್ತದೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಊ) | ಲೆಕ್ಕ ಅಧೀಕ್ಷಕರಿಗೆ ವೇತನ ಶ್ರೇಣಿ ರೂ.40900-70850 ಮಂಜೂರು ಮಾಡಿ ತಿದ್ದುಪಡಿ ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಎಷ್ಟು ದಿನಗಳ ಕಾಲವಕಾಶ ಬೇಕಾಗುತ್ತದೆ? | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ:08.12.2021ರ ಪತ್ರದಲ್ಲಿ ಸರ್ಕಾರದ ಅಧಿಸೂಚನೆಯ ಸಂಖ್ಯೆ: ಎಫ್‌ಡಿ 30 ಎಸ್‌ಆರ್‌ಪಿ 2013, ದಿನಾಂಕ:24.03.2017ರ ಅಂಶಗಳ ಕ್ರಮ ಸಂಖ್ಯೆ:63 ಮತ್ತು 75 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಗೆ ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಗೆ 2012ರ ಪರಿಷ್ಕೃತ ವೇತನ ಶ್ರೇಣಿಯು ಕ್ರಮವಾಗಿ ರೂ.20000-36000 ಹಾಗೂ ರೂ.21600-40050 ಎಂಬುದಾಗಿ ನಿಗದಿಯಾಗಿರುತ್ತದೆ. ಆದರೆ, ದಿನಾಂಕ:02.03.2000ರ ಆರ್ಥಿಕ |

| | | |
|---|---|---|
| | | ಇಲಾಖೆಯ ಆದೇಶದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಗೆ ತತ್ಸಮಾನವಾಗಿ ರೂ.5575-10620 ಎಂಬುದಾಗಿ ನಿಗದಿಗೊಳಿಸಿದ್ದಂತೆ, ಪ್ರಸ್ತುತದಲ್ಲಿ ಸಂವಾದಿ ವೇತನ ಶ್ರೇಣಿ ರೂ.40900-78200 ಗಳನ್ನು ನಿಗದಿಗೊಳಿಸಲಾಗಿದೆ. ಆದರೆ, ಸರ್ಕಾರದ ದಿನಾಂಕ:24.03.2017ರ ಅಧಿಸೂಚನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಗೆ ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕಾಧೀಕ್ಷಕರ ಹುದ್ದೆಗೆ ಭಿನ್ನ ವೇತನ ಶ್ರೇಣಿಗಳು ನಿಗದಿ ಇರುವುದರಿಂದ, ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿರುತ್ತಾರೆ.<br><br>ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ತಮ್ಮ ದಿನಾಂಕ:20.03.2021ರ ಪತ್ರದಲ್ಲಿ ಸರ್ಕಾರದ ಪತ್ರ ಸಂಖ್ಯೆ: ಇಡಿ 19 ಎಸ್‌ಟಿಬಿ 2020, ದಿನಾಂಕ:04.03.2021ರಂತೆ ರೂ.37900-70850 ವೇತನ ಶ್ರೇಣಿಯನ್ನು ನಿಗದಿಗೊಳಿಸಲು ಕ್ರಮವಹಿಸುವಂತೆ ತಮ್ಮ ವ್ಯಾಪ್ತಿಯ ಎಲ್ಲಾ ಉಪ ನಿರ್ದೇಶಕರುಗಳಿಗೆ ತಿಳಿಸಿರುತ್ತಾರೆ.<br><br>ಕಲಬುರಗಿ ಆಯುಕ್ತಾಲಯದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ ಡಿ 30 ಎಸ್ ಆರ್ ಪಿ 2013, ದಿನಾಂಕ:24.03.2017ರಲ್ಲಿನ ಕ್ರಮ ಸಂಖ್ಯೆ:63ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕ ಅಧೀಕ್ಷರ ಹುದ್ದೆಗೆ ನಿಗಧಿಪಡಿಸಿದ ವೇತನ ಶ್ರೇಣಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 06 ಎಸ್‌ಆರ್ ಪಿ 2018, ದಿನಾಂಕ:19.04.2018ರ ಪರಿಷ್ಕೃತ ವೇತ ಶ್ರೇಣಿ ರೂ.37900-70850 ರಡಿಯಲ್ಲಿ ಲೆಕ್ಕ ಅಧೀಕ್ಷಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.<br><br>ಆದ್ದರಿಂದ, ಈ ವಿಷಯದ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಮತ್ತು ಅಪರ ಆಯುಕ್ತರ ಆಯುಕ್ತಾಲಯಗಳ ವರದಿ / ಮಾಹಿತಿಯ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಡಿ 81 ಎಲ್‌ಐಬಿ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.